**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 76/2023

**ಸಾಕ್ಷಿಯನ್ನು ದಿನಾಂಕ** 8.4.2026 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹದೇಶ ಕುಮಾರ | ಪಿ.ಡಬ್ಲ್ಯೂ-5 |
| ತಂದೆಯ/ಗಂಡನ ಹೆಸರು | : | ಲೇಟ್ ಶಿವಮಾದಪ್ಪ | ಸಿ.ಡಬ್ಲ್ಯೂ-14 |
| ವಯಸ್ಸು | : | 52 | |
| ಉದ್ಯೋಗ | : | ರಾಜಸ್ವ ನಿರೀಕ್ಷಕರು | |
| ವಾಸ ಸ್ಥಳ | : | ಪಾಂಡವಪುರ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನಾನು ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯಲ್ಲಿ ರಾಜಸ್ವ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 1.10.2020 ರಿಂದ 20.6.2023 ರವರೆಗೆ ನಾನು ಚಿನಕುರಳಿ ವೃತ್ತದ ರಾಜಸ್ವ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ. ಚಾಸ 15 ಕಿರಣಕುಮಾರ ಇವರು ಆ ಕಾಲಕ್ಕೆ ಸಣಬ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ದಿನಾಂಕ 4.8.2022 ರಂದು ಪಾಂಡವಪುರ ಸರ್ಕಲ್ ಇನ್ಸಪೆಕ್ಟರ್ ಇವರು ಪಾಂಡವಪುರ ತಹಶೀಲ್ದಾರ್ ಇವರಿಗೆ ಒಂದು ಕೊಲೆ ಪ್ರಕರಣದ ತನಿಖೆಗೆ ಪಂಚರಾಗಿ ಸಿಬ್ಬಂದಿಯನ್ನು ನಿಯೋಜಿಸಲು ಪತ್ರ ಬರೆದಿದ್ದರು. ಆ ಕಾಲಕ್ಕೆ ತಹಶೀಲ್ದಾರ್ ಇವರು ನನ್ನನ್ನು ಹಾಗೂ ಚಾಸ 15 ಇವರನ್ನು ತನಿಖೆಗೆ ಸಹಕರಿಸುವಂತೆ ನಿಯೋಜಿಸಿ ಪೊಲೀಸ್ ಠಾಣೆಗೆ ಹೋಗಿ ವರದಿ

ಮಾಡಿಕೊಳ್ಳಲು ಹೇಳಿದರು. ಅದೇ ದಿನ ಮಧ್ಯಾಹ್ನ 3.30 ಕ್ಕೆ ನಾವಿಬ್ಬರೂ ಪಾಂಡವಪುರ ಪೊಲೀಸ್ ಠಾಣೆಗೆ ಹೋಗಿದ್ದೆವು. ಆ ಕಾಲಕ್ಕೆ ನಮಗೆ ನೋಟಿಸ್ ನೀಡಿ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನೋಟಿಸ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸನ್ನು ನಿಪಿ43 ಎಂದು, ಸಹಿಯನ್ನು ನಿಪಿ43 ಎ ಎಂದು ಗುರುತಿಸಿದೆ. ಆ ಕಾಲಕ್ಕೆ ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರಾದ ಸಿದ್ದಲಿಂಗಪ್ಪ ಹಾಗೂ ಚಂದ್ರಕಲಾ ಇವರನ್ನು ತೋರಿಸಿದರು. ಆ ಕಾಲಕ್ಕೆ ಆರೋಪಿತರಿಬ್ಬರು ನಾವು ಕೊಲೆ ಮಾಡಿದ್ದೇವೆ, ಶವ ಬೀಸಾಕಿರುವ ಸ್ಥಳ ತೋರಿಸುವುದಾಗಿ ಹೇಳಿದರು. ಆ ಕಾಲಕ್ಕೆ ನಾನು, ಚಾಸ 15, ಇಬ್ಬರು ಪೋಲಿಸ್ ಸಿಬ್ಬಂದಿ ಮತ್ತು ಆರೋಪಿತರು ಸರ್ಕಲ್ ಇನ್ಸಪೆಕ್ಟರ್ ಜೊತೆ ಠಾಣೆಯಿಂದ ಹೋಗಿದ್ದೆವು. ಆ ಕಾಲಕ್ಕೆ ಆರೋಪಿತರಿಬ್ಬರು ಬೇಬಿ ಗ್ರಾಮದ ಅಡ್ಡಳ್ಳದ ಬಳಿ ಕರೆದುಕೊಂಡು ಹೋದರು. ಅಲ್ಲಿ ತಾವು ಕೊಲೆ ಮಾಡಿದ ಪುಟ್ಟಮ್ಮ ಅಲಿಯಾಸ್ ಸಿದ್ದಮ್ಮ ಅಲಿಯಾಸ್ ಗೀತಾ ಇವರ ಶವದ ಕೆಳಗಿನ ಭಾಗವನ್ನು ಬೀಸಾಕಿದ್ದಾಗಿ ಹೇಳಿದರು. ಆ ಕಾಲಕ್ಕೆ ಆ ಶವದ ಭಾಗ ಅಲ್ಲಿರಲಿಲ್ಲ. ಆ ಸ್ಥಳದಲ್ಲಿ ಸಂಜೆ 4 ರಿಂದ 4.30 ರವರೆಗೆ ಮಹಜರ್ ಮಾಡಿದರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ44 ಎಂದು, ಸಹಿಯನ್ನು ನಿಪಿ44 ಎ ಎಂದು ಗುರುತಿಸಿದೆ. ಆ ಕಾಲಕ್ಕೆ ನಕಾಶೆಯನ್ನು ಸಹ ತಯಾರಿಸಿದರು. ಈಗ ನಾನು ನೋಡುತ್ತಿರುವ ನಕಾಶೆ ಅದೇ ಇದ್ದು ಅದನ್ನು ನಿಪಿ44 ಬಿ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಪೋಟೋಗಳನ್ನು ನಿಪಿ44 ಮಹಜರ್ ಕಾಲಕ್ಕೆ ತೆಗೆದಿದ್ದರು. ಸದರಿ ಪೋಟೋಗಳನ್ನು ನಿಪಿ45 ರಿಂದ ನಿಪಿ50 ಎಂದು ಗುರುತಿಸಿದೆ.

ನಂತರ ಆರೋಪಿತರು ದೇಹದ ಮೇಲ್ಭಾಗವನ್ನು ಬೀಸಾಕಿದ್ದ ಸ್ಥಳ ತೋರಿಸುವುದಾಗಿ ಕಟ್ಟೇರಿ ಗ್ರಾಮದ ವಿ.ಸಿ ನಾಲೆ ಬಳಿ ಕರೆದುಕೊಂಡು ಹೋಗಿ ಅಲ್ಲಿ ದೇಹದ ಮೇಲ್ಭಾಗ ಮತ್ತು ಎರಡು ಚಾಕುಗಳನ್ನು ನಾಲೆಗೆ ಬೀಸಾಕಿರುವುದಾಗಿ ಹೇಳಿದರು. ಆ ಕಾಲಕ್ಕೆ ನಾಲೆಯಲ್ಲಿ 2-3 ಅಡಿ ಮಾತ್ರ ನೀರು ಇತ್ತು. ಆ ಸ್ಥಳದಲ್ಲಿ ಹುಡುಕಾಡಿದಾಗ ಅಲ್ಲಿ ಶವದ ಮೇಲ್ಭಾಗ ಮತ್ತು ಚಾಕುಗಳು ಇರಲಿಲ್ಲ. ಆ ಸ್ಥಳದಲ್ಲಿ ಸಹ ಮಹಜರ್ ಮಾಡಿದರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ51 ಎಂದು, ಸಹಿಯನ್ನು ನಿಪಿ51 ಎ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಫೋಟೋಗಳನ್ನು ನಿಪಿ51 ಮಹಜರ್ ಕಾಲಕ್ಕೆ ತೆಗೆದಿದ್ದರು. ಸದರಿ ಫೋಟೋಗಳನ್ನು ನಿಪಿ52 ರಿಂದ ನಿಪಿ57 ಎಂದು ಗುರುತಿಸಿದೆ.

ನಂತರ ಆರೋಪಿತರು ತಾವು ಮೃತ ಮಹಿಳೆ ಶವದಿಂದ ತೆಗೆದುಕೊಂಡಿದ್ದ ಚಿನ್ನದ ಕುತ್ತಿಗೆ ಚೈನು ಹಾಗೂ ಓಲೆಗಳನ್ನು ಗಿರವಿ ಇಟ್ಟಿರುವ ಸ್ಥಳ ತೋರಿಸುವುದಾಗಿ ಪಾಂಡವಪುರದ ಮಾಲ್‌ಚಂದ್ ಲಾಲ್ ಪಾನ್ ಬ್ರೋಕರ್ಸ್ ಅಂಗಡಿಗೆ ಕರೆದುಕೊಂಡು ಹೋದರು. ಅದೇ ಅಂಗಡಿಯಲ್ಲಿ ಒಡವೆಗಳನ್ನು ಗಿರವಿ ಇಟ್ಟಿರುವುದಾಗಿ ಹೇಳಿದರು. ಆ ಕಾಲಕ್ಕೆ ಅಂಗಡಿಯ ಮಾಲೀಕರ ಹೆಂಡತಿ ಅಂಗಡಿಯಲ್ಲಿದ್ದರು. ಅವರು ಚೈನು, ಓಲೆ ಮತ್ತು ರಶೀದಿಯನ್ನು ಹಾಜರುಪಡಿಸಿದರು. ಆ ಸ್ಥಳದಲ್ಲಿ ಸಹ ಮಹಜರ್ ಮಾಡಿದರು. ಆ ಕಾಲಕ್ಕೆ ಚೈನು, ಓಲೆ ಮತ್ತು ರಶೀದಿಯನ್ನು ಪೋಲಿಸರು ಅಮಾನತ್ತುಪಡಿಸಿಕೊಂಡರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ58 ಎಂದು, ಸಹಿಯನ್ನು ನಿಪಿ58 ಎ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಫೋಟೋಗಳನ್ನು ನಿಪಿ58 ಮಹಜರ್ ಕಾಲಕ್ಕೆ ತೆಗೆದಿದ್ದರು. ಸದರಿ ಫೋಟೋಗಳನ್ನು ನಿಪಿ59 ರಿಂದ

ನಿಪಿ66 ಎಂದು ಗುರುತಿಸಿದೆ. ನಿಪಿ14 ಮತ್ತು 15 ಫೋಟೊದಲ್ಲಿ ಕಾಣುವ ಚೈನು ಮತ್ತು ಓಲೆ ಆ ದಿನ ಅಮಾನತ್ತುಪಡಿಸಿಕೊಂಡ ವಸ್ತುಗಳಿವೆ. ಎಲ್ಲ ಮಹಜರುಗಳ ಬಳಿಕ ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಮಹಜರ್ ಮಾಡಿದ ಸ್ಥಳಗಳಿಗೆ ಕರೆದುಕೊಂಡು ಹೋಗಿದ್ದ ವ್ಯಕ್ತಿಗಳು ಇರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಜೆ ಎಂ ವಕೀಲರಿಂದಃ</u>**

ಆ ದಿನ ನಾನು ಕರ್ತವ್ಯದಲ್ಲಿದ ಬಗ್ಗೆ ತಹಶೀಲ್ದಾರ್ ನೀಡಿದ್ದ ಪತ್ರವನ್ನು ಕೊಟ್ಟಿದ್ದೇನೆ. ಆ ದಿನ ಮೂರು ಜನ ಪೋಲಿಸರು, ಸರ್ಕಲ್ ಇನ್ಸಪೆಕ್ಟರ್, ನಾನು, ಚಾಸ 15 ಮತ್ತು ಆರೋಪಿತರು ಮಹಜರ್ ಮಾಡಿದ ಸ್ಥಳಗಳಿಗೆ ಹೋದೆವು. ಒಟ್ಟು 2 ಜೀಪುಗಳಲ್ಲಿ ಆ ಸ್ಥಳಗಳಿಗೆ ಹೋದೆವು. ಆ ಜೀಪುಗಳ ನೋಂದಣಿ ಸಂಖ್ಯೆ ಹಾಗೂ ಚಾಲಕರ ಹೆಸರು ಗೊತ್ತಿಲ್ಲ. ನಾವು ಹೋಗಿದ್ದ ಸ್ಥಳಗಳಲ್ಲಿ ಆ ಗ್ರಾಮಗಳ ಜನ ಸೇರಿರಲಿಲ್ಲ. ಬೇಬಿ ಗ್ರಾಮದ ಅಡ್ಡಳ್ಳ ಅಕ್ಕಪಕ್ಕ ಕೃಷಿ ಜಮೀನು ಇವೆ ಎಂದರೆ ನಿಜ. ಸಂಜೆ 4 ಗಂಟೆಗೆ ಕೃಷಿಕರು ಜಮೀನಿನಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನಾವು ಹೋದಾಗ ಯಾರು ಇರಲಿಲ್ಲ. ಆ ಸಮಯದಲ್ಲಿ ಕೃಷಿಕರು ಜಮೀನಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಮಹಜರನ್ನು ಪೋಲಿಸ್ ಸಿಬ್ಬಂದಿ ಬರೆದರು, ಅವರ ಹೆಸರು ಗೊತ್ತಿಲ್ಲ. ನಾವು ಹೋದ ನಂತರವೂ ಸಹ ದಾರಿಯಲ್ಲಿ ಹೋಗುವ ಜನ ಅಲ್ಲಿಗೆ ಬಂದಿದ್ದರು, ಆದರೆ ಅವರು ಅಲ್ಲಿ ನಿಲ್ಲಲಿಲ್ಲ. ಮಹಜರಿನೊಂದಿಗಿನ ನಕಾಶೆಯನ್ನು ಸಹ ಪೋಲಿಸರು ತಯಾರಿಸಿದರು. ಮಹಜರಿನಲ್ಲಿರುವ ವಿಷಯವನ್ನು ನಾನು ಹೇಳಿ ಬರೆಸಿಲ್ಲ ಆದರೆ ಬರೆದ ಬಳಿಕ ಓದಿ ಹೇಳಿದರು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಬೇಬಿ ಗ್ರಾಮದ ಅಡ್ಡಳ್ಳ ಬಳಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಈ ಕೇಸಿಗೋಸ್ಕರ

ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಕಟ್ಟೇರಿ ಗ್ರಾಮದ ವಿ.ಸಿ ನಾಲೆ ಅಕ್ಕಪಕ್ಕ ಕೃಷಿ ಜಮೀನು ಇದೆ, ರಸ್ತೆ ಇದೆ ಎಂದರೆ ನಿಜ. ಆ ಸ್ಥಳದಲ್ಲಿ ಜನ ಓಡಾಡುತ್ತಾರೆ ಎಂದರೆ ನಿಜ. ನಾವು ಸ್ಥಳಕ್ಕೆ ಹೋದಾಗ ಅಕ್ಕಪಕ್ಕ ಜನ ಇದ್ದರು. ಪೋಲಿಸರು ಅಕ್ಕಪಕ್ಕದ ಜನರನ್ನು ಸಾಕ್ಷಿಯಾಗಿ ಕರೆದಿರುವುದಿಲ್ಲ. ವಿ.ಸಿ ನಾಲೆಗೆ ಹೋದಾಗ ಸಂಜೆ 5 ಗಂಟೆಯಾಗಿತ್ತು. ಅಡ್ಡಹಳ್ಳದ ಬಳಿ ಮಹಜರ್ ಮಾಡಲು ಅಂದಾಜು 45 ನಿಮಿಷ ಆಗಿತ್ತು. ಅಡ್ಡಹಳ್ಳದಿಂದ ವಿ.ಸಿ ನಾಲೆ 6-7 ಕಿ.ಮೀ ದೂರದಲ್ಲಿದೆ. ವಿ.ಸಿ ನಾಲೆಯಲ್ಲಿ ಯಾವಾಗಲೂ ನೀರು ಹರಿಯುತ್ತದೆ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ನೀರು ನಿಂತಿತ್ತು, ನಿಂತ ನೀರು ಅಂದಾಜು 3 ಅಡಿ ಇತ್ತು. ನೀರನ್ನು ಯಾವಾಗ ನಿಲ್ಲಿಸಿದ್ದರು ಎಂದು ಗೊತ್ತಿಲ್ಲ. ವಿ.ಸಿ ನಾಲೆಯ ಬಳಿ ಮಹಜರನ್ನು ಸಿಬ್ಬಂದಿ ಬರೆದರು. ವಿ.ಸಿ ನಾಲೆಯ ಬಳಿ ಮಹಜರ್ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿ.ಸಿ ನಾಲೆ ಬಳಿಯ ಪೋಟೋಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

ಸಂಜೆ 6.15 ರಿಂದ 6.20 ಕ್ಕೆ ಪಾಂಡವಪುರದ ಪಾನ್‌ಬ್ರೋಕರ್ ಅಂಗಡಿಗೆ ಹೋದೆವು. ಆ ಅಂಗಡಿಯ ಅಕ್ಕಪಕ್ಕ ಬೇರೆ ಅಂಗಡಿಗಳಿವೆ ಎಂದರೆ ನಿಜ. ಅಂಗಡಿಯ ಮಾಲೀಕರ ಹೆಂಡತಿ ನೀಡಿದ ರಶೀದಿಯಲ್ಲಿ ಗಿರವಿ ಇಟ್ಟವರ ಹೆಸರು ಚಂದ್ರಕಲಾ ಎಂದು ಇತ್ತು. ಪೋಲಿಸರು ಈ ಪ್ರಕರಣಕ್ಕೋಸ್ಕರ ರಶೀದಿ ಮತ್ತು ಆಭರಣಗಳನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಪೊಲೀಸ್ ಠಾಣೆಯಲ್ಲಿ ನನ್ನ ಹೇಳಿಕೆ ಪಡೆದರು. ಎಲ್ಲ ಮಹಜರುಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಸಹ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು